1. ಈ ಕೆಳಗೆ ನೀಡಿದ ಪಟ್ಟಿಯಲ್ಲಿ ವತ್ಸ ಜನಪದದ ರಾಜಧಾನಿಯನ್ನು ಗುರುತಿಸಿ.

(1) ವೈಶಾಲಿ
(2) ಮಥುರಾ
(3) ಶ್ರಾವಸ್ತಿ
(4) ಕೌಶಾಂಬಿ

2. ಈ ಕೆಳಗಿನ ಒಂದು ಸ್ಥಳದಲ್ಲಿ ಸೂರ್ಯ ದೇವಾಲಯವಿಲ್ಲ. ಅದನ್ನು ಗುರುತಿಸಿ.

(1) ಕೊನಾರ್ಕ
(2) ಮಾರ್ತಾಂಡ
(3) ಮೊಧೆರಾ
(4) ಸಿರ್‌ಪುರ್

3. ಇಂದ್ರಜಾಲ ಹಾಗೂ ಮಾಟಮಂತ್ರಗಳ ಬಗ್ಗೆ ________ದಲ್ಲಿ ಉಲ್ಲೇಖವಿದೆ.

(1) ಋಗ್ವೇದ
(2) ಯಜುರ್ವೇದ
(3) ಸಾಮವೇದ
(4) ಅಥರ್ವವೇದ

4. ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯನ್ನು ಸ್ಥಾಪಿಸಿದವರು ________.

(1) ಬಿ.ಜಿ. ತಿಲಕ್
(2) ಗೋಪಾಲಕೃಷ್ಣ ಗೋಖಲೆ
(3) ಮಹಾತ್ಮ ಗಾಂಧೀಜಿ
(4) ಸುರೇಂದ್ರನಾಥ್ ಬ್ಯಾನರ್ಜಿ

5. ಈ ಮುಂದಿನ ಯಾವ ವಲಯದಲ್ಲಿ ' ಕುಕಾ ' ಚಳುವಳಿ ಪ್ರಾರಂಭವಾಯಿತು ?

(1) ಸಂಯುಕ್ತ ಪ್ರಾಂತ್ಯಗಳು
(2) ಬಾಂಬೆ
(3) ಪಂಜಾಬ್
(4) ಬೆಂಗಾಲ್

6. ಈ ಮುಂದೆ ತಿಳಿಸಿರುವ ವ್ಯಕ್ತಿಗಳ ಪೈಕಿ ಯಾರು ' ಶೇರ್–ಎ–ಪಂಜಾಬ್ ' ಎಂದು ಪ್ರಸಿದ್ಧರಾಗಿದ್ದರು ?

(1) ದಯಾನಂದ ಸರಸ್ವತಿ
(2) ಚಂದ್ರಶೇಖರ ಆಜಾದ್
(3) ಭಗತ್ ಸಿಂಗ್
(4) ಲಾಲಾ ಲಜಪತ್ ರಾಯ್

7. ಈ ಕೆಳಗಿನ ಯಾವುದು ಬನವಾಸಿ ಕದಂಬರ ಎರಡನೇ ರಾಜಧಾನಿಯಾಗಿತ್ತು ?

(1) ಉಚ್ಚಂಗಿ
(2) ಲಕ್ಕುಂಡಿ
(3) ಹಾನಗಲ್
(4) ಹಲಸಿ

8. ಈ ಕೆಳಗಿನ ಯಾರು ಮಲ್ಲಿಕಾಮೋದ ಎಂಬ ಬಿರುದನ್ನು ಹೊಂದಿದ್ದರು ?

(1) ಒಂದನೇ ಪುಲಕೇಶಿ
(2) ವಿಕ್ರಮಾದಿತ್ಯ
(3) ಎರಡನೇ ಜಯಸಿಂಹ
(4) ಮೂರನೇ ಗೋವಿಂದ

9. ಈ ಕೆಳಗಿನ ಆದಿಹಳೆಯ ಶಿಲಾಯುಗದ ನೆಲೆಗಳಲ್ಲಿ ಯಾವುದು ಕರ್ನಾಟಕದಲ್ಲಿರುವುದು ?

(1) ಚಿರ್ಕಿ ನೆವಾಸ
(2) ಇಸಾಂಪುರ
(3) ಜ್ವಾಲಾಪುರಂ
(4) ಪಲ್ಲಾವರ

10. ಕರ್ನಾಟಕದಲ್ಲಿ ಜಾತಿಗಳು ಹಾಗೂ ಸಮುದಾಯಗಳ ಸಂಘಟನೆಯಲ್ಲಿ ಮೂಡಿದ ಎಚ್ಚರವು ಹೊಸ ಉಪಕ್ರಮವಾಯಿತು. ಇದನ್ನು ಹೀಗೆಂದು ಕರೆಯಲಾಗಿದೆ:

(1) ಶೂದ್ರರು ಹಾಗೂ ಪಂಚಮರ ಚಳುವಳಿ
(2) ಆತ್ಮ ಗೌರವ ಚಳುವಳಿ
(3) ಹಿಂದುಳಿದ ವರ್ಗ ಚಳುವಳಿ
(4) ಅಸ್ಪೃಶ್ಯತೆ ವಿರುದ್ಧದ ಚಳುವಳಿ

11. 1881 ರಲ್ಲಿ ಸ್ಥಾಪಿಸಲಾದ ' ಮೈಸೂರು ಪ್ರತಿನಿಧಿ ಸಭೆ 'ಯ ಮುಖ್ಯ ಉದ್ದೇಶವೆಂದರೆ ________

(1) ಮಹಾರಾಜರ ಅಧಿಕಾರವನ್ನು ನಿಯಂತ್ರಿಸುವುದು.
(2) ದಿವಾನರ ಅಧಿಕಾರವನ್ನು ಅಡಗಿಸುವುದು.
(3) ಮೈಸೂರಿನ ಆರ್ಥಿಕ ಪ್ರಗತಿಯನ್ನು ಪರಿಶೀಲಿಸುವುದು.
(4) ಆಡಳಿತದ ಮೇಲಿನ ಜನಾಭಿಪ್ರಾಯವನ್ನು ಅಳೆಯುವುದು ಹಾಗೂ ಸರ್ಕಾರವನ್ನು ಗಮನಿಸುವುದು, ವಿಮರ್ಶಿಸುವುದು.

12. ದಿಲ್ಲಿಕ (ಆಧುನಿಕ ದೆಹಲಿ) ನಗರವನ್ನು ನಿರ್ಮಿಸಿದ ರಾಜ ______

(1) ತೋಮರ ವಂಶದ ಮೊದಲನೇ ಅನಂಗಪಾಲ
(2) ಚಾಲುಕ್ಯ ವಂಶದ ಮೊದಲನೇ ಭೀಮದೇವ
(3) ಚೌಹಾಣ ವಂಶದ ರಾಜ ಅಜಯದೇವ
(4) ಚೌಹಾಣ ವಂಶದ ಅಪರ ಗಾಂಗೇಯ

13. ಮೊಹಮದ್ ಬಿನ್ ತುಘಲಕ್‌ನ ಆಡಳಿತ ಕಾಲಮಾನದ ಘಟನಾವಳಿಗಳನ್ನು ಕಾಲಮಾನಿಕವಾಗಿ ಜೋಡಿಸಿರಿ.

(a) ರಾಜಧಾನಿಯ ವರ್ಗಾವಣೆ
(b) ದೋಆಬ್ ತೆರಿಗೆ
(c) ಟೋಕನ್ ನಾಣ್ಯ ಚಲಾವಣೆ
(d) ಮೂರನೇ ವೀರ ಬಲ್ಲಾಳನ ಮರಣ

ಕೆಳಗಿನ ಸಂಕೇತಗಳಿಂದ ಸರಿಯಾದ ಉತ್ತರ ಗುರ್ತಿಸಿರಿ.

(1) (a), (d), (c) ಮತ್ತು (b)
(2) (c), (a), (b) ಮತ್ತು (d)
(3) (b), (a), (c) ಮತ್ತು (d)
(4) (a), (c), (b) ಮತ್ತು (d)

14. I ನೇ ಪಟ್ಟಿಯನ್ನು II ನೇ ಪಟ್ಟಿಯ ಜೊತೆ ಜೋಡಿಸಿರಿ.

| I ನೇ ಪಟ್ಟಿ | II ನೇ ಪಟ್ಟಿ |
|---|---|
| (a) ಗಂಗಾದೇವಿ | I) ಪ್ರೌಢದೇವರಾಯನ ಆಸ್ಥಾನ ವಿದ್ವಾಂಸೆ |
| (b) ಅನ್ನಪೂರ್ಣದೇವಿ | II) ಕೃಷ್ಣದೇವರಾಯನ ತಾಯಿ |
| (c) ನಾಗಲಾಂಬ | III) ಮಧುರವಿಜಯಂನ ಕರ್ತೃ |
| (d) ಹೊನ್ನಮ್ಮ | IV) ಅಚ್ಚುತದೇವರಾಯನ ಆಸ್ಥಾನದಲ್ಲಿ ಕವಿಯತ್ರಿ |
| (e) ತಿರುಮಲಮ್ಮ | V) ಕೃಷ್ಣದೇವರಾಯನನ್ನು ವಿವಾಹವಾದ ಗಜಪತಿ ರಾಜಕುವರಿ |

ಸರಿಯಾದ ಸಂಖ್ಯೆಯನ್ನು ಜೋಡಿಸಿರಿ.

| | a | b | c | d | e |
|---|---|---|---|---|---|
| (1) | II | I | III | IV | V |
| (2) | V | II | I | IV | III |
| (3) | III | II | V | I | IV |
| (4) | III | V | II | I | IV |

15. ಶೇರ್‌ಷಾನ ಆಡಳಿತದಲ್ಲಿ ಪ್ರಾಂತ್ಯಗಳನ್ನು ಏನೆಂದು ಕರೆಯುತ್ತಿದ್ದರು ?

(1) ಇಕ್ತಾಗಳು
(2) ಸುಭಾಗಳು
(3) ಪರಗಣಗಳು
(4) ಸರ್ಕಾರಗಳು

16. ಈ ಕೆಳಗಿನವರಲ್ಲಿ ಯಾರು ಶಿವಾಜಿಯ ಧಾರ್ಮಿಕ ಗುರುಗಳಾಗಿದ್ದರು ?

(1) ರಾಮದಾಸ್
(2) ತುಕಾರಾಂ
(3) ಏಕನಾಥ್
(4) ಕೊಂಡದೇವ

17. ಹೊಯ್ಸಳರ ಕಾಲದ ಶಾಲೆಗಳನ್ನು ಕರೆಯುತ್ತಿದ್ದುದು ________

(1) ಶ್ರೇಣಿಗಳು
(2) ಘಟಿಕಾಗಳು
(3) ವಿಹಾರಗಳು
(4) ಆಹಾರಗಳು

18. ‘ ಕುಮಾರರಾಮನ ಕತೆ ’ಯನ್ನು ಬರೆದವರು ಯಾರು ?

(1) ಲಿಂಗಣ್ಣ
(2) ಚಾಮರಸ
(3) ನಂಜುಂಡ
(4) ಲಕ್ಕಣ್ಣ

19. ಕೆಳಕಂಡವುಗಳಲ್ಲಿ ಸರಿಯಾಗಿ ಹೊಂದುವಂಥದ್ದು ?

(1) ಪಾಂಡ್ಯರು : ಬಾದಾಮಿ
(2) ಚೋಳರು : ಮಧುರೈ
(3) ಕಾಕತೀಯರು : ವಾರಂಗಲ್
(4) ಹೊಯ್ಸಳರು : ಪಟ್ಟದಕಲ್ಲು

20. ಶ್ವೇತಕ್ರಾಂತಿಯು ಭಾರತದ ಯಾವ ರಾಜ್ಯದಲ್ಲಿ ಆರಂಭವಾಯಿತು ?

(1) ಕರ್ನಾಟಕ
(2) ತಮಿಳುನಾಡು
(3) ಗುಜರಾತ್
(4) ಕೇರಳ

21. ಈ ಮುಂದಿನ ಸಮುದ್ರ ಬಂದರುಗಳನ್ನು ಪರಿಶೀಲಿಸಿ :

(a) ಚೆನ್ನೈ
(b) ಮಚಲೀಪಟ್ನಂ
(c) ನಾಗಪಟ್ಟಣಂ
(d) ಟ್ಯೂಟಿಕೋರಿನ್

ಉತ್ತರದಿಂದ ದಕ್ಷಿಣದೆಡೆಗೆ ಚಲಿಸುವಂತಹ ಬಂದರುಗಳ ಸರಿಯಾದ ಕ್ರಮಾನುಗತಿಯು.

(1) (a), (b), (d), (c)
(2) (b), (a), (c), (d)
(3) (a), (c), (b), (d)
(4) (b), (a), (d), (c)

22. ವಿಷುವವೃತ್ತ ಪ್ರದೇಶವು ಗರಿಷ್ಠ ಮಳೆ ಪಡೆಯುವ ರೀತಿ ________

(1) ಪರ್ವತಮಳೆ
(2) ಆವರ್ತಮಳೆ (ಸೈಕ್ಲೋನಿಕ್)
(3) ಪರಿಸರಣ ಮಳೆ (ಕನ್‌ವೆಕ್ಷನಲ್)
(4) ಮಾನ್ಸೂನ್ ಮಳೆ

23. ಹಿಂದೂ ಮಹಾಸಾಗರದ ಅತಿ ಆಳವಾದ ಪ್ರಪಾತ

(1) ಚಾಲೆಂಜರ್
(2) ರೊಮಾಂಚೆ
(3) ಬ್ಲೇಕ್
(4) ಸುಂಡಾ

24. ಹೊಂದಿಸಿ ಬರೆಯಿರಿ.

| ಎ<br>ನಗ್ನೀಕರಣ ಕರ್ತೃ | ಬಿ<br>ಭೂಸ್ವರೂಪಗಳು |
|---|---|
| (a) ನದಿ | (I) ಓಯಸಿಸ್ |
| (b) ಗಾಳಿ | (II) ಲಗೂನ್ |
| (c) ಅಂತರ್ಜಲ | (III) ಮುಳುಗು ಸರೋವರ (ಮಡುವು) |
| (d) ಅಲೆಗಳು | (IV) ಕುಸಿತ (ನುಂಗುಬಿಲ) |

ಈ ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ :

| | a | b | c | d |
|---|---|---|---|---|
| (1) | (IV) | (I) | (II) | (III) |
| (2) | (II) | (I) | (III) | (IV) |
| (3) | (I) | (III) | (IV) | (II) |
| (4) | (III) | (I) | (IV) | (II) |

25. ಈ ಕೆಳಗಿನವುಗಳ ಪೈಕಿ ಪಶ್ಚಿಮಘಟ್ಟಗಳ ಉಗಮಗಳ ಬಗ್ಗೆ ಯಾವುದು ಅತ್ಯಂತ ಅಂಗೀಕೃತವಾದ ಅವಲೋಕನ ?

(1) ಇದು ಪರ್ವತಗಳ ಸರಣಿ
(2) ಇದು ಒಂದು ಮೇಲೆತ್ತಲಾದ ಮತ್ತು ಆಳವಾಗಿ ಸವೆದಿರುವ ಪರ್ವತಮಯ ಪ್ರದೇಶ
(3) ಇದು ಒಂದು ಪ್ರಸ್ಥಭೂಮಿ
(4) ಇದು ಒಂದು ಮಡಿಕೆ ಪರ್ವತ

26. ವಾಣಿವಿಲಾಸ ಅಣೆಕಟ್ಟೆಯನ್ನು ಇದರ ಮೇಲೆ ನಿರ್ಮಿಸಲಾಗಿದೆ.

(1) ಘಟಪ್ರಭಾ ನದಿ
(2) ವೇದಾವತಿ ನದಿ
(3) ಕಾವೇರಿ ನದಿ
(4) ವೃಷಭಾವತಿ ನದಿ

27. ಈ ಕೆಳಗಿನವುಗಳ ಪೈಕಿ ಯಾವುದು ಉತ್ತರ ಕರ್ನಾಟಕದಲ್ಲಿ ವಿಸ್ತಾರವಾಗಿ ಹರಡಿರುವ ಮತ್ತು ಪ್ರಭುತ್ವವನ್ನು ಹೊಂದಿರುವ ಮಣ್ಣು ?

(1) ಕೆಂಪು ಮಣ್ಣು
(2) ಕಪ್ಪು ಮಣ್ಣು
(3) ಲ್ಯಾಟರೈಟ್ ಮಣ್ಣು
(4) ಮೆಕ್ಕಲು ಮಣ್ಣು

28. ಕಾವೇರಿಯ 3 ದ್ವೀಪಗಳಲ್ಲಿ ಕೆಳಗಿನ ಯಾವುದು ‘ ಆದಿರಂಗ ’ ಎಂದು ಕರೆಯಲ್ಪಟ್ಟಿದೆ ?

(1) ಶಿವನ ಸಮುದ್ರ
(2) ಶ್ರೀರಂಗ
(3) ಮೇಲುಕೋಟೆ
(4) ಶ್ರೀರಂಗಪಟ್ಟಣ

29. ಕರ್ನಾಟಕದ ಮೊದಲ ರೈಲ್ವೆ ಪಥವು ಇಲ್ಲಿಂದ ಇಲ್ಲಿಯವರೆಗೆ.

(1) ಬೆಂಗಳೂರು – ಮದರಾಸು
(2) ಬೆಂಗಳೂರು – ಪುಣೆ
(3) ಬೆಂಗಳೂರು – ಅರಸೀಕರೆ
(4) ಬೆಂಗಳೂರು – ಹೈದರಾಬಾದ್

30. ಕರ್ನಾಟಕದಲ್ಲಿ ಕೆಳಗಿನ ಯಾವ ಪ್ರದೇಶವು ಕಡಿಮೆ ಮಳೆಯನ್ನು ಪಡೆಯುತ್ತದೆ ?

(1) ಕೊಡಗು
(2) ಚಳ್ಳಕೆರೆ
(3) ಬೀದರ್
(4) ಹೆಚ್. ಎನ್. ಪುರ

31. ವಿಕಿರಣಶೀಲ ವಸ್ತುವು ಈ ಕೆಳಗಿನವುಗಳಲ್ಲಿ ಯಾವುದನ್ನು ಹೊಮ್ಮಿಸುವುದಿಲ್ಲ.

(1) ಎಲೆಕ್ಟ್ರಾನ್‌ಗಳು
(2) ವಿದ್ಯುತ್‌ಕಾಂತೀಯ ವಿಕಿರಣಗಳು
(3) ಆಲ್ಫಾ ಕಣಗಳು
(4) ನ್ಯೂಟ್ರಾನುಗಳು

32. ಮಧ್ಯಾಹ್ನದ ಹೊತ್ತು ಸಾಮಾನ್ಯವಾಗಿ ಯಾವ ದಿಕ್ಕಿನಲ್ಲಿ ಕಾಮನಬಿಲ್ಲು ಕಾಣಿಸಿಕೊಳ್ಳುತ್ತದೆ ?

(1) ಉತ್ತರ
(2) ಪೂರ್ವ
(3) ದಕ್ಷಿಣ
(4) ಪಶ್ಚಿಮ

33. ವಾತಾವರಣದ ವಾಯುವಿನಲ್ಲಿರುವ ಪ್ರಧಾನವಾದ ಘಟಕ ಯಾವುದು ?

(1) $N_2$
(2) $O_2$
(3) $CO_2$
(4) Ar

34. ದ್ಯುತಿಸಂಶ್ಲೇಷಣ ಕ್ರಿಯೆಯಲ್ಲಿ ದ್ಯುತಿಸಂವೇದನಶೀಲ ವಸ್ತು ಯಾವುದು ?

(1) ಕ್ಲೋರಿನ್
(2) ಕ್ಲೋರೊಫಿಲ್
(3) ಕ್ಲೋರಮೈನ್ ï ಟಿ
(4) ಕ್ಲೋರೊಫಿನಾಲ್

35. ರಾಶಿರೀತ್ಯ ಮಾನವ ದೇಹದಲ್ಲಿ ಅತಿ ಹೆಚ್ಚು ಇರುವ ಧಾತುಗಳೆಂದರೆ________

(a) ಆಕ್ಸಿಜನ್ ಮತ್ತು ನೈಟ್ರೋಜನ್ (ಆಮ್ಲಜನಕ ಮತ್ತು ಸಾರಜನಕ)
(b) ಆಕ್ಸಿಜನ್ ಮತ್ತು ಸಿಲಿಕಾನ್ (ಆಮ್ಲಜನಕ ಮತ್ತು ಸಿಲಿಕಾನ್)
(c) ನೈಟ್ರೋಜನ್ ಮತ್ತು ಕಾರ್ಬನ್ (ಸಾರಜನಕ ಮತ್ತು ಇಂಗಾಲ)
(d) ಕಾರ್ಬನ್ ಮತ್ತು ಆಕ್ಸಿಜನ್ (ಇಂಗಾಲ ಮತ್ತು ಆಮ್ಲಜನಕ)

ಸಂಕೇತವನ್ನಾಧರಿಸಿ ಸರಿಯುತ್ತರ ಆಯ್ಕೆ ಮಾಡಿ:

(1) (a) ಮಾತ್ರ
(2) (b) ಮಾತ್ರ
(3) (c) ಮತ್ತು (d) ಮಾತ್ರ
(4) (d) ಮಾತ್ರ

36. ಡಿ.ಎನ್.ಎ. ಎಂಬ ಅನುವಂಶಿಕ ವಸ್ತುವನ್ನು ಪ್ರಾತ್ಯಕ್ಷಿಕೆ ಮಾಡಿದ್ದು ________

(1) ವಾಟ್ಸನ್ ಮತ್ತು ಕ್ರಿಕ್
(2) ಆವೇರಿ, ಮೆಕ್ಲಾಡ್ ಮತ್ತು ಮೆಕಾರ್ಟಿ
(3) ಹರ್ಷೆ ಮತ್ತು ಚೇಸ್
(4) ಫ್ರೆಡ್ರಿಕ್ ಸ್ಯಾಂಗರ್

37. ಆಮ್ಲ ಮಳೆಯಲ್ಲಿ ಮಳೆ ನೀರು ಕೊಂಚ ಆಮ್ಲೀಯವಾಗಿರಲು ಅದರಲ್ಲಿ ಕರಗಿರುವ _________ಕಾರಣ.

(1) ಕ್ಲೋರಿನ್
(2) ಜಲಜನಕ (ಹೈಡ್ರೋಜನ್) ಪೆರಾಕ್ಸೈಡ್
(3) ಗಂಧಕದ (ಸಲ್ಫರ್) ಆಕ್ಸೈಡ್
(4) ಇಂಗಾಲದ (ಕಾರ್ಬನ್) ಡೈ ಆಕ್ಸೈಡ್

38. ಸೌರಶಕ್ತಿಯು _________

(1) ಭೂಮಿಯ ಮೇಲಿನ ಪ್ರಾಥಮಿಕ ಶಕ್ತಿ ಮೂಲವಾಗಿದೆ.
(2) ಭೂಮಿಯ ಮೇಲಿನ ದ್ವಿತೀಯಕ ಶಕ್ತಿ ಮೂಲವಾಗಿದೆ.
(3) ಶಕ್ತಿಯ ಮೂಲವಲ್ಲ.
(4) ಭೂಮಿಯ ಮೇಲಿನ ತೃತೀಯಕ ಶಕ್ತಿ ಮೂಲವಾಗಿದೆ.

39. ಕೆಳಕಾಣಿಸಿದ ಹಸಿರುಮನೆ ಅನಿಲಗಳಲ್ಲಿ ಯಾವ ಅನಿಲವು ವಾಯುಮಂಡಲದಲ್ಲಿ ಅತ್ಯಧಿಕ ಸಾರತೆಯನ್ನು ಹೊಂದಿದೆ.

(1) ಮೀಥೇನ್
(2) ನೈಟ್ರಸ್ ಆಕ್ಸೈಡ್
(3) ಇಂಗಾಲದ ಡೈಆಕ್ಸೈಡ್
(4) ನೀರು

40. ಓಜೋನ್ ಪದರವು ಹಾನಿ ಹೊಂದಲು ಈ ಕೆಳಗಿನವುಗಳಲ್ಲಿ ಯಾವುದು ಕಾರಣವಾಗಿದೆ ?

(1) $CO_2$
(2) $CH_4$
(3) $CFC_S$
(4) ಮೇಲಿನ ಯಾವುದೂ ಅಲ್ಲ.

41. ಜಾಗತಿಕ ತಾಪಮಾನ ಏರಿಕೆಯನ್ನು ಕಡಿಮೆ ಮಾಡುವ ಸೂಕ್ತ ಶಕ್ತಿ ಮೂಲವು __________

(1) ಪಳೆಯುಳಿಕೆ ಇಂಧನವಾಗಿದೆ.
(2) ಪುನರ್‌ನವೀಕರಣವಾಗುವ ಶಕ್ತಿ ಮೂಲಗಳು.
(3) (a) ಮತ್ತು (b) ಎರಡೂ
(4) ಮೇಲಿನ ಯಾವುದೂ ಅಲ್ಲ.

42. ವಾಯುಮಾಲಿನ್ಯದಿಂದಾಗುವ ಮಾಲಿನ್ಯ __________

(1) ಜಲಮಾಲಿನ್ಯ
(2) ಆಮ್ಲಮಳೆ
(3) ಮಣ್ಣು ಮಾಲಿನ್ಯ
(4) ಮೇಲಿನ ಎಲ್ಲವೂ

43. ಲಿಜೆನ್ಸ್ (ಕಲ್ಲು ಹೂ)ಗಳು ವಾಯುಮಾಲಿನ್ಯ ಅಧ್ಯಯನದಲ್ಲಿ ಪ್ರಮುಖವಾದುದು, ಏಕೆಂದರೆ __________

(1) ಅವು ಮಾಲಿನ್ಯಕರ ಪರಿಸರದಲ್ಲಿ ಬೆಳೆಯುವುವು.
(2) ಮಾಲಿನ್ಯಕರ ಪರಿಸರದಲ್ಲಿ ವೃದ್ಧಿಯಾಗುವುವು.
(3) ವಾಯುಮಂಡಲವನ್ನೇ ಸಮರ್ಥವಾಗಿ ಶುದ್ಧಗೊಳಿಸುವುವು.
(4) ಸಲ್ಫರ್ ಡೈಆಕ್ಸೈಡ್‌ನಂತಹ ಮಾಲಿನ್ಯಕಾರಕಕ್ಕೆ ಸಂವೇದಿಗಳು.

44. ಈ ಪೈಕಿ ನೈಸರ್ಗಿಕ ಪಾಲಿಮರ್ ಅಲ್ಲದ್ದು ಯಾವುದು ?

(1) ಸೆಲ್ಯುಲೋಸ್
(2) ಪ್ರೋಟೀನ್ಸ್
(3) ನ್ಯೂಕ್ಲಿಯಿಕ್ ಆಮ್ಲಗಳು
(4) ನೈಲಾನ್ –66

45. ಪ್ರೆಷರ್ ಕುಕ್ಕರ್‌ನಲ್ಲಿ ಅಡುಗೆ ವೇಗವಾಗಿ ಆಗಲು ಕಾರಣ ________

(1) ಹೆಚ್ಚು ಒತ್ತಡದಿಂದಾಗಿ ತಾಪ ಹೆಚ್ಚುತ್ತದೆ.
(2) ಒಳಗೆ ಬಿಸಿ ನೀರಿರುತ್ತದೆ.
(3) ಹಬೆಯು ತಪ್ಪಿಸಿಕೊಳ್ಳಲಾಗದು.
(4) ವಿಸ್ತಾರವಾದ ಮುಚ್ಚಳ.

46. ಸಾಮಾನ್ಯವಾಗಿ ಬಳಕೆ ಮಾಡುವ ಚಲುವೆಕಾರಕ ________

(1) ಆಲ್ಕೋಹಾಲ್
(2) ಇಂಗಾಲದ ಡೈಆಕ್ಸೈಡ್
(3) ಕ್ಲೋರಿನ್
(4) ಸೋಡಿಯಮ್ ಕ್ಲೋರೈಡ್

47. ಈ ಕೆಳಗಿನ ಯಾವ ಮೂಲಭೂತ ಹಕ್ಕನ್ನು ಭಾರತ ಸಂವಿಧಾನದಲ್ಲಿ ತೆಗೆದುಹಾಕಲಾಗಿರುತ್ತದೆ ?

(1) ಆಸ್ತಿಯ ಹಕ್ಕು
(2) ಧಾರ್ಮಿಕ ಹಕ್ಕು
(3) ಸಂವಿಧಾನಾತ್ಮಕ ಪರಿಹಾರಗಳ ಹಕ್ಕು
(4) ಇವುಗಳಲ್ಲಿ ಯಾವುದೂ ಅಲ್ಲ

48. ಮೂಲಭೂತ ಕರ್ತವ್ಯಗಳನ್ನು ಈ ಕೆಳಗಿನ ಯಾವುದರಿಂದ ಸಂವಿಧಾನದಲ್ಲಿ ಸೇರಿಸಲಾಗಿರುತ್ತದೆ :

(1) ಸಂವಿಧಾನ ಸಭೆ
(2) ಸಂವಿಧಾನದ (ಎಂಭತ್ತಾರನೆಯ ತಿದ್ದುಪಡಿ) ಅಧಿನಿಯಮ, 2002
(3) ಸಂವಿಧಾನದ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮ, 1976
(4) ಸಂವಿಧಾನದ (ಎಪ್ಪತ್ತನೆಯ ತಿದ್ದುಪಡಿ) ಅಧಿನಿಯಮ, 1992

49. ರಾಷ್ಟ್ರಪತಿಯವರ ಮರಣದ, ರಾಜೀನಾಮೆಯ ಅಥವಾ ಅವರನ್ನು ತೆಗೆದು ಹಾಕಿದ ಕಾರಣದಿಂದ ಉಂಟಾದ ಅವರ ಹುದ್ದೆಯ ತೆರವಾದ ಸ್ಥಾನವನ್ನು ಭರ್ತಿ ಮಾಡಲು ಈ ಕೆಳಗಿನ ಯಾವ ರೀತಿಯಲ್ಲಿ ಚುನಾವಣೆಯನ್ನು ನಡೆಸಬೇಕಾಗುವುದು ?

(1) 6 ತಿಂಗಳುಗಳ ಒಳಗಾಗಿ / ಅದಕ್ಕಿಂತ ಹೆಚ್ಚಾಗದ ಅವಧಿಯಲ್ಲಿ
(2) ಸಾಧ್ಯವಾದಷ್ಟು ಬೇಗನೆ
(3) 1 ವರ್ಷಕ್ಕಿಂತ ಹೆಚ್ಚಾಗದ ಅವಧಿಯಲ್ಲಿ
(4) 9 ತಿಂಗಳುಗಳಿಗಿಂತ ಹೆಚ್ಚಾಗದ ಅವಧಿಯಲ್ಲಿ

50. ಚುನಾವಣೆ ಸುಧಾರಣೆಗೆ ಸಂಬಂಧಿಸಿದ ಸಮಿತಿಗಳು:

(a) ದಿನೇಶ್ ಗೋಸಾಮಿ ಸಮಿತಿ
(b) ಇಂದ್ರಜಿತ್ ಗುಪ್ತ ಸಮಿತಿ
(c) ಗಾಡ್‌ಗಿಲ್ ಸಮಿತಿ
(d) ಟಿ.ಎನ್. ಶೇಷನ್ ಸಮಿತಿ

ಕೆಳಗಿನ ಸಂಕೇತಗಳಿಂದ ಸರಿಯಾದ ಉತ್ತರ ಗುರ್ತಿಸಿರಿ.

(1) (a) ಮತ್ತು (b) ಮಾತ್ರ
(2) (b) ಮತ್ತು (c) ಮಾತ್ರ
(3) (c) ಮತ್ತು (d) ಮಾತ್ರ
(4) (a) ಮತ್ತು (d) ಮಾತ್ರ

51. ಸಂವಿಧಾನ ಮೂಲದ ರಚನಾ ಸಿದ್ಧಾಂತ ಕುರಿತಂತೆ ಈ ಪೈಕಿ ಯಾವುದು ಸರಿ ?

(a) ಸಂವಿಧಾನದ ಮೂಲಭೂತ ಚೌಕಟ್ಟು ಬದಲಿಸುವ ಹಕ್ಕು ಪಾರ್ಲಿಮೆಂಟಿಗಿಲ್ಲ.
(b) ಸಂವಿಧಾನವನ್ನು ತಿದ್ದುಪಡಿ ಮಾಡುವ ಸ್ವಾತಂತ್ರ್ಯ ಎಂದರೆ ಅದನ್ನು ಹಾಳು ಮಾಡುವ ಸ್ವಾತಂತ್ರ್ಯ ಅಲ್ಲ.
(c) ಸಂವಿಧಾನದ ಯಾವುದೇ ಭಾಗದ ತಿದ್ದುಪಡಿ ಮಾಡಲು ಪಾರ್ಲಿಮೆಂಟಿಗೆ ಅಸೀಮಿತ ಹಾಗೂ ಪೂರ್ಣ ಅಧಿಕಾರವಿದೆ.
(d) ರಾಜ್ಯ ವಿಧಾನಮಂಡಲಗಳೊಂದಿಗೆ ಪಾರ್ಲಿಮೆಂಟು ಸರಳ ಬಹುಮತದೊಂದಿಗೆ ಸಂವಿಧಾನದ ಮೂಲ ಸ್ವರೂಪವನ್ನು ಬದಲಾಯಿಸಬಹುದು.

ಕೆಳಗಿನ ಸಂಕೇತಗಳಿಂದ ಸರಿಯಾದ ಉತ್ತರ ಗುರ್ತಿಸಿರಿ.

(1) (a) ಮತ್ತು (b)
(2) (b) ಮತ್ತು (c)
(3) (c) ಮಾತ್ರ
(4) ಮೇಲಿನ ಯಾವುದೂ ಅಲ್ಲ

52. ರಾಷ್ಟ್ರೀಯ ತುರ್ತು ಪರಿಸ್ಥಿತಿ ಕುರಿತಂತೆ ಯಾವುದು ತಪ್ಪು ?

(a) ರಾಷ್ಟ್ರೀಯ ತುರ್ತು ಪರಿಸ್ಥಿತಿಯನ್ನು ಆರು ತಿಂಗಳಿಗೂ ಮೀರಿ ವಿಸ್ತರಿಸುವಂತಿಲ್ಲ.

(b) ಸಂವಿಧಾನದ 352ನೇ ಕಾಲಂನಲ್ಲಿ ಘೋಷಿಸಿರುವ ಹಾಗೆ ಭಾರತದ ಭದ್ರತೆಗೆ ಬೆದರಿಕೆ ಉಂಟಾದಾಗ ಮಾತ್ರ ಜಾರಿಗೊಳಿಸಬೇಕು.

(c) ಮೂಲಭೂತ ಹಕ್ಕುಗಳು ಅಸ್ತವ್ಯಸ್ತವಾಗುವವು.

(d) ಲೋಕಸಭೆ ಪೂರ್ಣವಾಗಿ ನಿಷ್ಕ್ರಿಯ ಆಗುವುದು.

ಕೆಳಗಿನ ಸಂಕೇತಗಳಿಂದ ಸರಿಯಾದ ಉತ್ತರ ಗುರ್ತಿಸಿರಿ.

(1) (a) ಮತ್ತು (b)

(2) (b) ಮತ್ತು (c)

(3) (c) ಮತ್ತು (d)

(4) (a) ಮತ್ತು (d)

53. ಸಂವಿಧಾನದ 73ನೇ ತಿದ್ದುಪಡಿ ಕಾಯ್ದೆಯಲ್ಲಿ ಈ ವಿಷಯಗಳಿವೆ.

(a) ನಗರ ಪ್ರದೇಶಗಳಲ್ಲಿ ಗ್ರಾಮೀಣ ಸ್ಥಳೀಯ ಸರ್ಕಾರಗಳನ್ನು ಸ್ಥಾಪಿಸುವುದು.

(b) ಸ್ಥಳೀಯ ಸರ್ಕಾರದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಮೀಸಲಾತಿ.

(c) ರಾಜ್ಯ ಚುನಾವಣಾ ಆಯೋಗ ಸ್ಥಾಪನೆ ಮತ್ತು ರಾಜ್ಯ ಹಣಕಾಸು ಆಯೋಗ ಸ್ಥಾಪನೆ.

(d) ಮಹಿಳೆಯರಿಗೆ ಮೀಸಲಾತಿ ನೀಡಲಾಗಿಲ್ಲ.

ಕೆಳಗಿನ ಸಂಕೇತಗಳಿಂದ ಸರಿಯಾದ ಉತ್ತರ ಗುರ್ತಿಸಿರಿ.

(1) (a) ಮತ್ತು (b)

(2) (b) ಮತ್ತು (c)

(3) (a) ಮತ್ತು (d)

(4) ಈ ಎಲ್ಲವೂ

54. ಆಸ್ತಿ ಹಕ್ಕಿಗೆ ಸಂಬಂಧಿಸಿದಂತೆ ಈ ಪೈಕಿ ಯಾವುದು ಸರಿ ?

(a) ಬೇಡಿಕೆಯ ಮೇರೆಗೆ ಮೂಲಭೂತ ಹಕ್ಕಾಗಿ ಲಭ್ಯವಿದೆ.

(b) ಇದು ಸಮಾಜದ ಸಿರಿವಂತ ವರ್ಗಕ್ಕೆ ಮಾತ್ರ ಸುಲಭವಾಗಿ ಲಭ್ಯವಿದೆ.

(c) ಇದನ್ನು ಮೂಲಭೂತ ಹಕ್ಕಿನಿಂದ, 1978ರ 44ನೇ ತಿದ್ದುಪಡಿ ಮಸೂದೆಯಿಂದ ತೆಗೆಯಲಾಗಿದೆ.

(d) ಕಲಮು 300(ಎ) ಪ್ರಕಾರ ಕೇವಲ ಕಾನೂನು ಹಕ್ಕಾಗಿ ಉಳಿದಿದೆ.

ಕೆಳಗಿನ ಸಂಕೇತಗಳಿಂದ ಸರಿಯಾದ ಉತ್ತರ ಗುರ್ತಿಸಿರಿ.

(1) (a) ಮತ್ತು (b)

(2) (b) ಮತ್ತು (c)

(3) (c) ಮತ್ತು (d)

(4) (a) ಮತ್ತು (c)

55. ಎಸ್‌ವಿಇಇಪಿ ಯನ್ನು ಕುರಿತಂತೆ ಯಾವುದು ಸರಿ ?

(a) ಇದು ಮತದಾರರಿಗೆ ವ್ಯವಸ್ಥಿತ ಶಿಕ್ಷಣ ಮತ್ತು ಚುನಾವಣಾ ಭಾಗವಹಿಸುವಿಕೆ ಕಾರ್ಯಕ್ರಮ.

(b) ಇದು ಮತದಾರ ಜಾಗೃತಿ ಮತ್ತು ಭಾಗವಹಿಸುವಿಕೆ ಹೆಚ್ಚಿಸುವುದು ಇದರ ಗುರಿ.

(c) ಚುನಾವಣೆಗಳ ಬಗ್ಗೆ ಯುವ ಮತದಾರರ ಧೋರಣೆಯನ್ನು ಇದು ಬದಲಿಸಿದೆ.

(d) ಚುನಾವಣಾ ಪ್ರಕ್ರಿಯೆಯನ್ನು ಮತದಾರ ಸ್ನೇಹಿ ಆಗಿಸುವ ಗುರಿ ಹೊಂದಿದೆ.

ಕೆಳಗಿನ ಸಂಕೇತಗಳಿಂದ ಸರಿಯಾದ ಉತ್ತರ ಗುರ್ತಿಸಿರಿ.

(1) (a) ಮತ್ತು (b)

(2) (b) ಮತ್ತು (c)

(3) (c) ಮತ್ತು (d)

(4) ಮೇಲಿನ ಎಲ್ಲವೂ

56. ಈ ಕೆಳಗಿನವುಗಳಲ್ಲಿ ಯಾವುವು ಸರಿಯಾಗಿ ಹೊಂದಾಣಿಕೆಯಾಗುತ್ತದೆ ?

(a) 42ನೇ ತಿದ್ದುಪಡಿ ಕಾಯ್ದೆ – ಪೌರರ ಮೂಲಭೂತ ಕರ್ತವ್ಯಗಳ ಸೇರ್ಪಡೆ ಮಾಡಿದೆ.
(b) 44ನೇ ತಿದ್ದುಪಡಿ ಕಾಯ್ದೆ – ಸಂವಿಧಾನಕ್ಕೆ ಸಾಮಾಜಿಕತೆ ಮತ್ತು ಜಾತ್ಯಾತೀತತೆಯನ್ನು ಸೇರ್ಪಡೆ ಮಾಡಿದೆ.
(c) 73ನೇ ತಿದ್ದುಪಡಿ ಕಾಯ್ದೆ – ಆಧುನಿಕ ಪ್ರಜಾಪ್ರಭುತ್ವ ಸರ್ಕಾರಗಳು.
(d) 74ನೇ ತಿದ್ದುಪಡಿ ಕಾಯ್ದೆ – ನಗರ ಸ್ಥಳೀಯ ಸರ್ಕಾರಗಳು.

ಕೆಳಗಿನ ಸಂಕೇತಗಳಿಂದ ಸರಿಯಾದ ಉತ್ತರ ಗುರ್ತಿಸಿರಿ.

(1) (a) ಮತ್ತು (b)
(2) (b) ಮತ್ತು (c)
(3) (c) ಮತ್ತು (d)
(4) (a) ಮತ್ತು (d)

57. ಪಕ್ಷವು ರಾಷ್ಟ್ರೀಯ ಪಕ್ಷವೆಂದು ಪರಿಗಣಿಸಲು ಇದು ಮಾನದಂಡ ಅಲ್ಲ.

(a) ಕನಿಷ್ಠ ಎರಡು ರಾಜ್ಯಗಳಲ್ಲಿ ಆ ಪಕ್ಷದ ಸರ್ಕಾರ ಇರಬೇಕು.
(b) ಸಾಮಾನ್ಯ ಚುನಾವಣೆಗಳಲ್ಲಿ ಪಕ್ಷವು ಶೇಕಡಾ 6ರಷ್ಟು ಮತಗಳಿಸಬೇಕು ಹಾಗೂ ನಾಲ್ಕು ಲೋಕಸಭಾ ಸ್ಥಾನಗಳನ್ನು ಗೆಲ್ಲಬೇಕು.
(c) ಪಕ್ಷವು ನಾಲ್ಕು ಅಥವಾ ಅಧಿಕ ರಾಜ್ಯಗಳಲ್ಲಿ ರಾಜ್ಯಪಕ್ಷವೆಂದು ಪರಿಗಣಿತವಾಗಬೇಕು.
(d) ಕೊನೆಯ ಪಕ್ಷ 3 ವಿವಿಧ ರಾಜ್ಯಗಳಿಂದ, ಲೋಕಸಭೆಗೆ ಕನಿಷ್ಠ ಶೇಕಡಾ ಎರಡು ಸ್ಥಾನಗಳನ್ನು ಗೆಲ್ಲಬೇಕು.

58. ಈ ಪೈಕಿ ಭಾರತದ ಚುನಾವಣಾ ಆಯೋಗದ ಕರ್ತವ್ಯವಲ್ಲದ್ದು ಯಾವುದು ?

(a) ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುವುದು.
(b) ರಾಜಕೀಯ ಪಕ್ಷಗಳ ನೋಂದಣಿ.
(c) ಸೂಕ್ಷ್ಮ ಕ್ಷೇತ್ರಗಳಿಗೆ ವಿಶೇಷ ವೀಕ್ಷಕರ ನೇಮಕಾತಿ.
(d) ಚುನಾವಣೆಯ ಅವಧಿಯಲ್ಲಿ ರಾಜಕೀಯ ಪಕ್ಷಗಳಿಗೆ ಆರ್ಥಿಕ ನೆರವು ನೀಡುವುದು.

ಕೆಳಗಿನ ಸಂಕೇತಗಳಿಂದ ಸರಿಯಾದ ಉತ್ತರ ಗುರ್ತಿಸಿರಿ.

(1) (a) ಮತ್ತು (b)
(2) (b) ಮತ್ತು (c)
(3) (a) ಮತ್ತು (d)
(4) (c) ಮತ್ತು (d)

59. ಈ ಪೈಕಿ ಯಾವುದು ರಾಜ್ಯ ನೀತಿಯ ನಿರ್ದೇಶನಾ ತತ್ವ ಅಲ್ಲ ?

(a) ಸಮಾನ ಕೆಲಸಕ್ಕೆ ಸಮಾನ ವೇತನ.
(b) ರಾಷ್ಟ್ರೀಯ ಲಾಂಛನ ಮತ್ತು ರಾಷ್ಟ್ರಗೀತೆಗಳನ್ನು ಗೌರವಿಸುವುದು.
(c) ಗ್ರಾಮ ಪಂಚಾಯತಿಗಳ ಆಯೋಜನೆ.
(d) ವೈಜ್ಞಾನಿಕ ಮನೋವೃತ್ತಿಯನ್ನು ಮತ್ತು ಮಾನವೀಯತೆಯನ್ನು ಅಭಿವೃದ್ಧಿಗೊಳಿಸುವುದು.

ಕೆಳಗಿನ ಸಂಕೇತಗಳಿಂದ ಸರಿಯಾದ ಉತ್ತರ ಗುರ್ತಿಸಿರಿ.

(1) (a) ಮತ್ತು (b)
(2) (b) ಮತ್ತು (c)
(3) (c) ಮತ್ತು (d)
(4) (b) ಮತ್ತು (d)

60. ಭಾಕ್ರಾನಂಗಲ್ ಅಣೆಕಟ್ಟು ________ ರಾಜ್ಯದಲ್ಲಿದೆ.

(1) ಬಿಹಾರ್
(2) ಒರಿಸ್ಸಾ
(3) ಪಂಜಾಬ್
(4) ಕರ್ನಾಟಕ

61. 12ನೇ ಪಂಚವಾರ್ಷಿಕ ಯೋಜನೆಯು ________ ಗುರಿಯನ್ನು ಹೊಂದಿದೆ.

(1) ಶೇಕಡಾ 10 ರಷ್ಟು ಬೆಳವಣಿಗೆ
(2) ಶೇಕಡಾ 8 ರಷ್ಟು ಬೆಳವಣಿಗೆ
(3) ಶೇಕಡಾ 7 ರಷ್ಟು ಬೆಳವಣಿಗೆ
(4) ಶೇಕಡಾ 6 ರಷ್ಟು ಬೆಳವಣಿಗೆ

62. ಭಾರತದ 12ನೇ ಪಂಚವಾರ್ಷಿಕ ಯೋಜನೆಯ ಕರಡಿನ ಪ್ರಕಾರ, ಕೃಷಿಯು ________ಗೆ ಕಾರಣವಾಗಿದೆ.

(1) ಜಿಡಿಪಿಯ ಶೇಕಡಾ 14.
(2) ಜಿಡಿಪಿಯ ಶೇಕಡಾ 27.
(3) ಜಿಡಿಪಿಯ ಶೇಕಡಾ 28.
(4) ಜಿಡಿಪಿಯ ಶೇಕಡಾ 32.

63. ಭಾರತೀಯ ಆರ್ಥಿಕತೆಯ ಸ್ವರೂಪವು ಇದರ ಪರವಾಗಿ ಬದಲಾಗಿದೆ.

(1) ಕೃಷಿವಲಯ
(2) ಕೈಗಾರಿಕಾವಲಯ
(3) ಗಣಿಗಾರಿಕಾವಲಯ
(4) ಸೇವಾವಲಯ

64. ಭಾರತದಲ್ಲಿ ಬಡತನರೇಖೆ ಮತ್ತು ಬಡತನ ಅನುಪಾತಗಳ ಬಗ್ಗೆ ವ್ಯಾಖ್ಯೆ ನೀಡಿರುವ ಏಜೆನ್ಸಿಯೆಂದರೆ ____

(1) ಕೇಂದ್ರ ಅಂಕಿ ಅಂಶ ಸಂಸ್ಥೆ
(2) ಹಿಂದಿನ ಯೋಜನಾ ಆಯೋಗ
(3) ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ
(4) ರಾಷ್ಟ್ರೀಯ ಕುಟುಂಬ ಮಾಹಿತಿ ವ್ಯವಸ್ಥೆ

65. MGNREGA ಯ ಗುರಿಯು ಈ ಪೂರೈಕೆ ______

(1) ಗ್ರಾಮೀಣ ಪ್ರದೇಶಗಳಲ್ಲಿ ಕನಿಷ್ಠ ಅಗತ್ಯಗಳು ಮತ್ತು 30 ಕೆ.ಜಿ.ಯಷ್ಟು ಪಿ.ಡಿ.ಎಸ್.ಗಳನ್ನು ಬಡಕುಟುಂಬಗಳಿಗೆ ಒದಗಿಸುವುದು.
(2) ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗಾನ್ವೇಷಕರಿಗೆ ಕನಿಷ್ಟ 100 ದಿನಗಳ ಉದ್ಯೋಗಾವಕಾಶ.
(3) ನಗರ ಪ್ರದೇಶಗಳಲ್ಲಿ ಕನಿಷ್ಟ 100 ದಿನಗಳ ಉದ್ಯೋಗಾವಕಾಶ.
(4) ಸಾರ್ವತ್ರಿಕವಾಗಿ 100 ದಿನಗಳ ಉದ್ಯೋಗಾವಕಾಶ ಮತ್ತು 30 ಕೆ.ಜಿ.ಯಷ್ಟು ಪಿ.ಡಿ.ಎಸ್. ನೀಡಿಕೆ.

66. 2011ರ ಜನಗಣತಿಯ ಪ್ರಕಾರ ಭಾರತದ ಒಟ್ಟು ಜನಸಂಖ್ಯೆಯಲ್ಲಿ ಉದ್ಯೋಗಸ್ಥ ವಯೋಮಾನದವರ ಅನುಪಾತ __________

(1) 25% ಗಿಂತ ಕಡಿಮೆ
(2) 50% ಗಿಂತ ಕಡಿಮೆ
(3) 50% ಗಿಂತ ಅಧಿಕ
(4) 75% ಗಿಂತ ಅಧಿಕ

67. ಋತುಮಾನಬದ್ಧ ನಿರುದ್ಯೋಗವು ಈ ವಲಯದ ಲಕ್ಷಣ ______

(1) ಸೇವಾವಲಯ
(2) ಕೈಗಾರಿಕಾವಲಯ
(3) ಕೃಷಿವಲಯ
(4) ಬ್ಯಾಕಿಂಗ್‌ವಲಯ

68. ಇತ್ತೀಚಿನ ವರ್ಷಗಳಲ್ಲಿ ಭಾರತದಲ್ಲಿ ಹಣದುಬ್ಬರಕ್ಕೆ ಕಾರಣವಾದ ಅಂಶಗಳು__________

(1) ಕಚ್ಚಾತೈಲ ಬೆಲೆ ಹೆಚ್ಚಳ
(2) ಉತ್ಪಾದಿತ ಸಾಮಗ್ರಿಗಳ ಬೆಲೆ ಹೆಚ್ಚಳ
(3) ಆಹಾರಧಾನ್ಯಗಳ ಬೆಲೆ ಹೆಚ್ಚಳ
(4) ಜಾಗತಿಕ ಬೆಲೆ ಹೆಚ್ಚಳ

69. ಕರ್ನಾಟಕವನ್ನು ಎಷ್ಟು ಕೃಷಿ ವಾಯುಗುಣವಲಯವನ್ನಾಗಿಸಲಾಗಿದೆ ?

(1) ಎಂಟು
(2) ಆರು
(3) ಹತ್ತು
(4) ಹನ್ನೆರಡು

70. ಭಾರತದಲ್ಲಿ ಆಹಾರ ಭದ್ರತೆಯ ಮುಖ್ಯ ಸಾಧನ ________

(1) ಜನ್‌ಧನ್ ಯೋಜನಾ
(2) ಸ್ವಾಭಿಮಾನ್ ಯೋಜನೆ
(3) ಸಾರ್ವಜನಿಕ ವಿತರಣಾ ವ್ಯವಸ್ಥೆ
(4) ಯಶಸ್ವಿನಿ ಯೋಜನೆ

71. ಕರ್ನಾಟಕದಲ್ಲಿ ಸಗಟು ಬೆಲೆ ಸೂಚ್ಯಂಕವನ್ನು ನಿರ್ಧರಿಸುವುದು________

(1) ಅರ್ಥಶಾಸ್ತ್ರ ಮತ್ತು ಅಂಕಿ ಅಂಶಗಳ ನಿರ್ದೇಶನಾಲಯ.
(2) ಯೋಜನಾ ವಿಭಾಗ.
(3) ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ.
(4) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ.

72. ರಾಜ್ಯಸರ್ಕಾರವೇ ತೆರಿಗೆ ವಿಧಿಸಿ ಸಂಗ್ರಹಿಸುವ ಎರಡು ತೆರಿಗೆಗಳು ಯಾವುವು ?

(1) ಕೃಷಿ ಆದಾಯ ತೆರಿಗೆ ಮತ್ತು ವೃತ್ತಿ ತೆರಿಗೆ
(2) ಕಾರ್ಪೊರೇಟ್ ತೆರಿಗೆ ಮತ್ತು ಮಾರಾಟ ತೆರಿಗೆ
(3) ಸಂಪತ್ತು ತೆರಿಗೆ ಮತ್ತು ಮೌಲ್ಯವರ್ಧಿತ ತೆರಿಗೆ
(4) ಸರಕು ಮತ್ತು ಸೇವಾತೆರಿಗೆ ಹಾಗೂ ಆದಾಯ ತೆರಿಗೆ.

73. ಭಾರತದಲ್ಲಿ ಎಫ್.ಡಿ.ಐ. ಗೆ ಇನ್ನೂ ಅನುಮತಿಸದಿರುವುದು.

(1) ಗಣಿಗಾರಿಕೆ ಚಟುವಟಿಕೆಗಳು
(2) ವಿಮಾನವಲಯ
(3) ಆಸ್ತಿ ಪುನರ್ ನಿರ್ಮಾಣ ಕಂಪೆನಿಗಳು
(4) ಬಹುಭಾಷು ಚಿಲ್ಲರೆ ಮಾರಾಟ

74. ಪುರ ಎನ್ನುವುದು  ಇದಕ್ಕೆ ಅಭಿವೃದ್ಧಿ ಮಾದರಿ ಆಗಿರುವುದು.

(1) ಗ್ರಾಮೀಣ ಪ್ರದೇಶಗಳಿಗೆ
(2) ನಗರ ಪ್ರದೇಶಗಳಿಗೆ
(3) ವಿಶೇಷ ಆರ್ಥಿಕವಲಯಗಳಿಗೆ
(4) ಬೃಹತ್ ನಗರಗಳಿಗೆ

75. 2011ರ ಜನಗಣತಿ ಪ್ರಕಾರ ಈ ಕೆಳಕಂಡವುಗಳಲ್ಲಿ ಅತ್ಯಂತ ಜನದಟ್ಟಣೆಯನ್ನುಳ್ಳದ್ದು ಯಾವುದು ?

(1) ಪಶ್ಚಿಮಬಂಗಾಳ
(2) ಮಹಾರಾಷ್ಟ್ರ
(3) ರಾಜಸ್ಥಾನ
(4) ದೆಹಲಿ

76. ನ್ಯಾಷನಲ್ ಇನ್‌ಸ್ಟಿಟ್ಯೂಷನ್ ಟ್ರಾನ್ಸ್ ಫಾರ್ಮಿಂಗ್ ಇಂಡಿಯಾ ಆಯೋಗ (NITI Ayog) ಗೆ ಸಂಬಂಧಿಸಿದಂತೆ ಈ ಕೆಳಗಿನವುಗಳಲ್ಲಿ ಯಾವುದು ಸರಿ ?

(a) ಅದು ಆಲೋಚನಾ ತಂಡವಾಗಿ ಅಥವಾ ಕಾರ್ಯನೀತಿಯ ಕ್ರಮಬದ್ಧ ಪ್ರತಿಪಾದನೆಗೆ ಸಲಹಾ ಸಮಿತಿಯಾಗಿ ಸೇವೆ ನೀಡುತ್ತದೆ.
(b) ಯೋಜನಾ ಆಯೋಗದಂತೆಯೇ NITI ಆಯೋಗವೂ ಸಹ ಪ್ರಧಾನಮಂತ್ರಿಗಳ ಅಧ್ಯಕ್ಷತೆಯಲ್ಲಿರುತ್ತದೆ.
(c) ಆಡಳಿತ ಪರಿಷತ್ತು, ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳ ಎಲ್ಲಾ ಮುಖ್ಯಮಂತ್ರಿಗಳು ಮತ್ತು ಲೆಫ್ಟಿನೆಂಟ್ ಗವರ್ನರ್‌ಗಳನ್ನು ಒಳಗೊಂಡಿರುತ್ತದೆ.
(d) ವಿವಿಧ ಸಚಿವಾಲಯಗಳಿಗೆ ಮತ್ತು ರಾಜ್ಯ ಸರ್ಕಾರಗಳಿಗೆ ಧನವಿನಿಯೋಗ ಮಾಡುವ ಅಧಿಕಾರ ಪಡೆದಿರುತ್ತದೆ.

ಕೆಳಗಿನ ಸಂಕೇತಗಳಿಂದ ಸರಿಯಾದ ಉತ್ತರ ಗುರ್ತಿಸಿರಿ.

(1) (a) ಮತ್ತು (c) ಮಾತ್ರ
(2) (b) ಮತ್ತು (d) ಮಾತ್ರ
(3) (a), (b) ಮತ್ತು (c) ಮಾತ್ರ
(4) (c) ಮತ್ತು (d) ಮಾತ್ರ

77. ‘ ಬಾಲಿ ಪ್ಯಾಕೇಜ್ ’ ಎಂದರೇನು ?

(1) ಪ್ರವಾಸ ಪ್ಯಾಕೇಜ್
(2) ವ್ಯಾಪಾರ ಒಪ್ಪಂದ
(3) ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಗ್ಯಾಟ್ ಪ್ಯಾಕೇಜ್
(4) ಪ್ರವಾಸೋದ್ಯಮ ಸಿದ್ಧತಾ ವ್ಯವಸ್ಥೆ

78. óಜ್ಞಾನಾಧಾರಿತ ಉದ್ಯಮಗಳು ô ಎಂಬ ಪದವು ಈ ಕೆಳಗಿನ ಉದ್ದಿಮೆಗಳನ್ನು ಕುರಿತದ್ದಾಗಿದೆ ?

(1) ತಂತ್ರಜ್ಞಾನದ ಪ್ರದಾನದ (Input) ಪ್ರಮುಖತೆಗೆ ಸಂಬಂಧಿಸಿದಂತಹ ಉದ್ದಿಮೆಗಳು.
(2) ತಂತ್ರಜ್ಞಾನದ ಪ್ರದಾನದ (nput) ಪ್ರಮುಖತೆ / ಅಥವಾ ಮಾನವ ಬಂಡವಾಳಕ್ಕೆ ಸಂಬಂಧಿಸಿದಂತಹ ಉದ್ದಿಮೆಗಳು.
(3) ಜ್ಞಾನವನ್ನು ಉತ್ಪಾದಿಸುವಂತಹ ಉದ್ದಿಮೆಗಳು.
(4) ಮೇಲಿನ ಯಾವುದೂ ಅಲ್ಲ.

79. ಹೊಂದಿಸಿ ಬರೆಯಿರಿ.

| | |
|---|---|
| (a) ನಗಿಸುವ ಅನಿಲ | (I) ಮೀಥೇನ್ |
| (b) ಶ್ರೇಷ್ಠ ಅನಿಲ | (II) ಫ್ಲೋರೀನ್ |
| (c) ನೈಸಗಿಕ ಅನಿಲ | (III) ಹೀಲಿಯಂ |
| (d) ಹ್ಯಾಲೋಜನ್ | (IV) ನೈಟ್ರಸ್ ಆಕ್ಸೈಡ್ |

ಕೆಳಗಿನ ಸಂಕೇತಗಳಿಂದ ಸರಿಯಾದ ಉತ್ತರ ಗುರ್ತಿಸಿರಿ.

| | a | b | c | d |
|---|---|---|---|---|
| (1) | (I), | (II), | (III), | (IV) |
| (2) | (II), | (III), | (I), | (IV) |
| (3) | (IV), | (I), | (III), | (II) |
| (4) | (IV), | (III), | (I), | (II) |

80. ರಾಹಗಿರಿ ದಿನವನ್ನು ಯಾರಿಗಾಗಿ ಆಚರಿಸಲಾಯಿತು ?

(1) ಅಲ್ಪಸಂಖ್ಯಾತರಿಗಾಗಿ
(2) ಪ.ಜಾ. / ಪ.ವರ್ಗದ ಜನರಿಗಾಗಿ
(3) ಈಶಾನ್ಯ ರಾಜ್ಯದ ಜನರಿಗಾಗಿ
(4) ವಿಕಲಾಂಗ ಚೇತನರಿಗಾಗಿ

81. ರಾಜಾಜಿ ರಾಷ್ಟ್ರೀಯ ಉದ್ಯಾನವನ ಯಾವ ರಾಜ್ಯದಲ್ಲಿದೆ.

(1) ಬಿಹಾರ
(2) ಉತ್ತರ ಪ್ರದೇಶ
(3) ಜಾರ್ಖಂಡ್
(4) ಉತ್ತರಖಂಡ

82. ಭಾರತದಲ್ಲಿ ಸದ್ಯ ಕಾರ್ಯನಿರ್ವಹಿಸುತ್ತಿರುವ ಪರಮಾಣು ಶಕ್ತಿ ಸ್ಥಾವರಗಳೆಷ್ಟು ?

(1) 15
(2) 28
(3) 21
(4) 25

83. 2015ರ ಮ್ಯಾನ್ ಬೂಕರ್ ಪ್ರಶಸ್ತಿ ಗಳಿಸಿದವರು ಯಾರು ?

(1) ಮಾರಲೊನ ಜೇಮ್ಸ್
(2) ರಿಚರ್ಡ್ ಫ್ಲಾನಗನ್
(3) ಅಲಿ ಸ್ಮಿತ್
(4) ಎಲೆನೊರ ಕಾಟನ್

84. ಮೆಕ್ಕೆಜೋಳ ತಂತ್ರಜ್ಞಾನ ಉದ್ಯಾನ ಎಲ್ಲಿದೆ ?

(1) ವಿಜಯಪುರ
(2) ಬೆಳಗಾವಿ
(3) ಗದಗ
(4) ರಾಣಿಬೆನ್ನೂರು

85. ಕಾಯಕನಿಧಿ ಯೋಜನೆಯು __________

(1) ದೈಹಿಕ ಅಂಗವಿಕಲರಿಗೆ
(2) ಸರ್ಕಾರದ ನಿವೃತ್ತ ನೌಕರರಿಗೆ
(3) ಆಟೋ ಚಾಲಕರಿಗೆ
(4) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ (ಎ.ಪಿ.ಎಮ್.ಸಿ.) ಹಮಾಲರಿಗೆ

86. ಪದವಿ ಮಟ್ಟದಲ್ಲಿ ಲಿಂಗ ಶಿಕ್ಷಣವನ್ನು ಕಡ್ಡಾಯಗೊಳಿಸಿದ ರಾಜ್ಯ ಯಾವುದು ?

(1) ಕರ್ನಾಟಕ
(2) ತಮಿಳುನಾಡು
(3) ತೆಲಂಗಾಣ
(4) ಒರಿಸ್ಸಾ

87. ಈ ಕೆಳಗಿನ ಯಾವ ಹೊಂದಾಣಿಕೆಯು ಸರಿಯಾಗಿದೆ ?

| | | |
|---|---|---|
| (1) ವೊಕ್ಸವಾಗನ್ | – | ಇದೊಂದು ಸ್ಟಾರ್ಟ–ಅಪ್ ವರ್ಗ |
| (2) ಝುಕರಬರ್ಗ್ | – | ಕಾರ್ ತಯಾರಕರು |
| (3) ಯುನಿಕಾರ್ನ್ | – | ಫೇಸ್‌ಬುಕ್ ಸಂಸ್ಥಾಪಕರು |
| (4) ವಿವೊ | – | ಚೀನಾದ ಸ್ಮಾರ್ಟ್‌ಫೋನ್ ತಯಾರಕರು |

88. ವಾತಾವರಣದಲ್ಲಿ ಹೆಚ್ಚಿನ ಪ್ರಮಾಣದ ಇಂಗಾಲದ ಡೈಆಕ್ಸೈಡ್ ($CO_2$) ಮತ್ತು ಇತರೆ ಅನಿಲಗಳಿಂದ ಸೂರ್ಯನ ಕಿರಣಗಳ ಪ್ರತಿಫಲವು ಕಡಿಮೆಯಾಗಿ ಭೂಮಿಯ ಮೇಲ್ಮೈ ತಾಪ ಏರುವುದನ್ನು ________ ಎಂದು ಕರೆಯುತ್ತಾರೆ.

(1) ವಾಯುಮಾಲಿನ್ಯ
(2) ಹಿಮಟೋಪಿಗಳ ಕರಗುವಿಕೆ
(3) ಹಸಿರು ಮನೆ ಪರಿಣಾಮ (ಗ್ರೀನ್ ಹೌಸ್ ಇಫೆಕ್ಟ್)
(4) ಸೌರ ವಿಕಿರಣ

89. ಲೆಗ್ಯೂಮಿನಸ್ ಸಸ್ಯಗಳಲ್ಲಿ ಬ್ಯಾಕ್ಟೀರಿಯಾಗಳಿಂದ ಬೇರುಗಳಲ್ಲಿ ಗಂಟುಗಳ ರೂಪದಲ್ಲಿ ಸಾರಜನಕವು ಸ್ಥಿರೀಕರಣವಾಗುವ ಕ್ರಿಯೆಗೆ ________ ಸಂಬಂಧ ಎಂದು ಕರೆಯುತ್ತಾರೆ.

(1) ಸಾಂಕೇತಿಕ (ಸಿಂಬಯೋಟಿಕ್)
(2) ಸಾಂಕೇತಿಕವಲ್ಲದ (ನಾನ್ ಸಿಂಬಯೋಟಿಕ್)
(3) ವೇಗವರ್ಧಕ (ಕ್ಯಾಟಿಲಿಟಿಕ್)
(4) ಪೌಷ್ಟಿಕ (ನ್ಯೂಟ್ರಿಟಿವ್)

90. ಪಿಎಚ್ 7 ________ ಅನ್ನು ಸೂಚಿಸುತ್ತದೆ.

(1) ಕ್ಷಾರೀಯ (ಅಲ್ಕಲಿನಿಟಿ)
(2) ಆಮ್ಲೀಯ (ಅಸಿಡಿಟಿ)
(3) ತಟಸ್ಥ (ನ್ಯೂಟ್ರಾಲಿಟಿ)
(4) ಇವು ಯಾವುವೂ ಅಲ್ಲ

91. ಸಾಮಾನ್ಯ ದೇಹರಾಶಿ ತೂಕ ಸೂಚಿಸಿರಿ.

(1) 18.5 - 24.99
(2) 15 - 18
(3) 25 ï 29.99
(4) 30 ಕ್ಕಿಂತಲೂ ಅಧಿಕ

92. óAôಗೆ 26ನ್ನು, ' B 'ಗೆ 25, ಹೀಗೆ óZ ô ರವರೆಗೆ ಪ್ರತ್ಯಾದೇಶ ಮಾಡುತ್ತಾ ಬಂದರೆ, ಯಾವುದಕ್ಕೆ 1 ಪ್ರತ್ಯಾದೇಶವಾಗಿರುತ್ತದೆ ? óXRAY ôಎಂಬ ಪದಕ್ಕೆ ಪ್ರತ್ಯಾದೇಶ ಮಾಡಲಾದ ಸಂಖ್ಯೆಗಳ ಒಟ್ಟು ಮೊತ್ತ ಎಷ್ಟಾಗಿರುತ್ತದೆ ?

(1) 33
(2) 40
(3) 37
(4) 73

93. W, X, Y, Z ಗಳು ನಾಲ್ಕು ವ್ಯಾಪಾರಿಗಳಾಗಿದ್ದಾರೆ. óZ ô ವ್ಯಾಪಾರಿಯು ವಾರ್ಷಿಕ ಆದಾಯವು 100 ಕೋಟಿ ವರಮಾನ ಹೊಂದಿದ್ದು, ಅದು W, X, Y ಗಳ ವಾರ್ಷಿಕ ವರಮಾನಗಳ ಮೊತ್ತಕ್ಕಿಂತಲೂ ಅಧಿಕವಾಗಿದೆ. óY ô ನ ವಾರ್ಷಿಕ ವರಮಾನ óX ôನ ವಾರ್ಷಿಕ ವರಮಾನಕ್ಕಿಂತ 5 ಕೋಟಿ ಕಡಿಮೆ ಇದೆ. ಹಾಗಿದ್ದರೆ óW ôನ ವಾರ್ಷಿಕ ವರಮಾನ ಎಷ್ಟು ?

(1) 10 ಕೋಟಿ
(2) 5 ಕೋಟಿ
(3) 25 ಕೋಟಿ
(4) ಕೊಟ್ಟಿರುವ ಮಾಹಿತಿಯು ಲೆಕ್ಕಚಾರ ಮಾಡಲು ಸಾಲದು.

94. ಅಮೀಬಾಗಳು 3 ನಿಮಿಷಗಳಲ್ಲಿ ದ್ವಿಗುಣಗೊಳ್ಳುತ್ತವೆ. A ಮತ್ತು B ಎಂಬ ಎರಡು ಸರಿಸಮಾನಧಾರಕಗಳಲ್ಲಿ ಒಂದು ಹಾಗೂ ಎರಡು ಅಮೀಬಾಗಳು ಅನುಕ್ರಮವಾಗಿ ಇವೆ. ಎರಡನೇ ಪಾತ್ರೆ 3 ಗಂಟೆಯಲ್ಲಿ ಭರ್ತಿ ಆಗುತ್ತದೆ. A ಭರ್ತಿ ಆಗಲು ಬೇಕಾಗುವ ಅವಧಿ.

(1) 3 ಗಂಟೆಗಳು
(2) 2 ಗಂಟೆಗಳು 57 ನಿಮಿಷ
(3) 3 ಗಂಟೆಗಳು 3 ನಿಮಿಷ
(4) 6 ಗಂಟೆಗಳು

95. óA ôಮತ್ತು óB ôಎಂಬ ಇಬ್ಬರು ಗೆಳೆಯರು ಒಂದು ಸ್ಥಾನದಿಂದ ನಡೆಯುತ್ತಾರೆ. óA ô ಉತ್ತರದೆಡೆಗೆ ಸಾಗಿ 3 ಕಿ.ಮೀ. ನಂತರ ಬಲಕ್ಕೆ ತಿರುಗಿ ಮತ್ತೆ 4 ಕಿ.ಮೀ. ಸಾಗುತ್ತಾರೆ. óB ôಪಶ್ಚಿಮಕ್ಕೆ ಸಾಗಿ 5 ಕಿ.ಮೀ. ತೆರಳಿದ ನಂತರ ಬಲಕ್ಕೆ ತಿರುಗಿ 3 ಕಿ.ಮೀ. ಸಾಗುತ್ತಾನೆ. ಅವರಿಬ್ಬರ ನಡುವಣ ಅಂತರ ______

(1) 8 ಕಿ.ಮೀ.
(2) 9 ಕಿ.ಮೀ.
(3) 1 ಕಿ.ಮೀ.
(4) 4 ಕಿ.ಮೀ.

96. ಹತ್ತು ವಿದ್ಯಾರ್ಥಿಗಳಿರುವ ತರಗತಿಯಲ್ಲಿ ಮೂವರು ಇತಿಹಾಸದಲ್ಲಿ ನಪಾಸಾದರು, ಆರು ಮಂದಿ ಭೂಗೋಳದಲ್ಲಿ ನಪಾಸಾದರು. ಇಬ್ಬರು ಎರಡರಲ್ಲೂ ನಪಾಸಾದರು. ಎರಡೂ ವಿಷಯಗಳಲ್ಲಿ ಪಾಸಾದವರೆಷ್ಟು ಮಂದಿ ?

(1) 1
(2) 2
(3) 3
(4) 0

97. ಪುಸ್ತಕವೊಂದರ ಪುಟಗಳಿಗೆ 1 ನೇ ಪುಟದಿಂದ ಅನುಕ್ರಮವಾಗಿ 852 ಸಂಖ್ಯೆಗಳನ್ನು ನೀಡಲಾಗಿದೆ. ಪುಸ್ತಕದಲ್ಲಿ ಇರುವ ಪುಟಗಳ ಸಂಖ್ಯೆ ________

(1) 284
(2) 316
(3) 320
(4) 351

98. ತಾಜಾಹಣ್ಣಿನಲ್ಲಿ 68% ನೀರು ಮತ್ತು ಒಣ ಹಣ್ಣಿನಲ್ಲಿ 20% ನೀರು ಇದೆ. 100 ಕೆ.ಜಿ. ತಾಜಾ ಹಣ್ಣಿನಿಂದ ಎಷ್ಟು ಒಣ ಹಣ್ಣುಗಳನ್ನು ಪಡೆಯಬಹುದು ?

(1) 20
(2) 30
(3) 40
(4) 50

99. 2015ನೇ ವರ್ಷದ ಅಕ್ಟೋಬರ್ ತಿಂಗಳ ಶನಿವಾರದಂದು ಮಗು ಜನಿಸಿದೆ. ಅದರ ಮೊದಲ ಹುಟ್ಟು ಹಬ್ಬವನ್ನು ಯಾವ ವಾರದಂದು ಆಚರಿಸಲಾಗುತ್ತದೆ ?

(1) ಭಾನುವಾರ
(2) ಶುಕ್ರವಾರ
(3) ಶನಿವಾರ
(4) ಸೋಮವಾರ

100. ಸಿಹಿಪೆಟ್ಟಿಗೆಯ ಅಳತೆಯು 10 x 8 x 3 cm ಇದ್ದು, 3 cm ವ್ಯಾಸದ ಲಾಡುಗಳನ್ನು ಅದರಲ್ಲಿ ಏಕರೀತಿಯಾಗಿ ಜೋಡಿಸಲಾಗಿದೆ. ಗರಿಷ್ಠ ಸಂಖ್ಯೆಯ ಲಾಡುಗಳನ್ನು ತುಂಬಿಸಿದರೆ ಪೆಟ್ಟಿಗೆಯಲ್ಲಿ ಖಾಲಿ ಉಳಿಯುವ ಗಾತ್ರ ಎಷ್ಟಾಗಿರುತ್ತದೆ ?

(1) 6
(2) 126.86
(3) 113.14
(4) 0